4) ಕ್ಲಸ್ಟರ ವಿವರ

ಕ್ರ.ಸಂ.	ಕ್ಲಸ್ಟರ ಹೆಸರು	ಸ್ಥಳ
1	ಜಾಗರಿ ಕ್ಲಸ್ಟರ(ಎಸ್.ಸಿ)	ಕುಡಚಿ ತಾ:ರಾಯಬಾಗ
2	ದ್ರಾಕ್ಷಿ ಸಂಸ್ಕರಣೆ(ಎಸ್.ಸಿ)	ಕುಡಚಿ ತಾ:ರಾಯಬಾಗ
3	ಬೆಳ್ಳಿ ಆಭರಣಗಳು	ಮಾಂಗೂರ ತಾ:ಚಿಕ್ಕೋಡಿ
4	ಗಾರ್ಮೆಂಟ	ನಿಪ್ಪಾಣಿ ತಾ:ಚಿಕ್ಕೋಡಿ
5	ವುಡನ ಪ್ಯಾಟರ್ನ್	ಬೆಳಗಾವಿ ತಾ:ಬೆಳಗಾವಿ
6	ಮಶೀನ ಟೂಲ್ಸ	ಬೆಳಗಾವಿ ತಾ:ಬೆಳಗಾವಿ
7	ಲೆದರ (ಎಸ್.ಸಿ)	ಮದಭಾವಿ ತಾ:ಅಥಣಿ
8	ಗಾರ್ಮೆಂಟ	ರಾಮದುರ್ಗ ತಾ:ರಾಮದುರ್ಗ

ಟ್ರಾಫಿಕ್ ಸಮಸ್ಯೆ

400(344) ಶ್ರೀ ಅಖಂಡ ಶ್ರೀನಿವಾಸಮೂರ್ತಿ.ಆರ್.

ಅ) ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಟ್ಯಾನಿ ರೋಡ್ ಹಾಗೂ ದಿನ್ನೂರು ಮುಖ್ಯರಸ್ತೆಗಳಲ್ಲಿ ಜನ ಸಂದಣಿ ಮತ್ತು ವಾಹನಗಳ ಸಂಚಾರದಿಂದ ಟ್ರಾಫಿಕ್ ಸಮಸ್ಯೆ ಎದುರಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗಳ ಅಗಲೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು(ಪೂರ್ಣ ವಿವರ ನೀಡುವುದು);

ಇ) ಹಾಗಿದ್ದಲ್ಲಿ, ಈ ರಸ್ತೆಗಳ ಅಗಲೀಕರಣಕ್ಕೆ ಜಾಗ ಬಿಟ್ಟುಕೊಡುವ ಕಟ್ಟಡ ಮಾಲೀಕರಿಗೆ ನೀಡುವ ಪರಿಹಾರದ ಮೊತ್ತವೆಷ್ಟು (ಪೂರ್ಣ ವಿವರ ನೀಡುವುದು);

ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯ ಮಂತ್ರಿಯವರು)

ಅ) ಬಂದಿದೆ.

ಆ) ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ, ಟ್ಯಾನರಿ ರೋಡ್ ಹಾಗೂ ದಿನ್ನೂರು ಮುಖ್ಯರಸ್ತೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಕಟಿಸಿರುವ ಆರ್.ಎಂ.ಪಿ 2015 ಪ್ರಕಾರ 24.00 ಮೀ.ಗೆ ಅಗಲೀಕರಣಗೊಳಿಸಲು ಉದ್ದೇಶಿಸಿದ್ದು, ಈಗಾಗಲೇ ಸಾರ್ವಜನಿಕ ಅಧಿಸೂಚನೆ ಪ್ರಕಟಣೆ ಹೊರಡಿಸಲಾಗಿದೆ. ಅಗಲೀಕರಣ ಭಾಗದಲ್ಲಿ ಬರುವ ಸ್ವತ್ತುಗಳನ್ನು ಟಿ.ಡಿ.ಆರ್ ಮುಖೇನ ಸ್ವಾಧೀನಪಡಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.

ಇ) ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 154 ಬೆಂರೂಪ್ರಾ 2004, ದಿನಾಂಕ : 18–01–2005 ರಂತೆ ರಸ್ತೆ ಅಗಲೀಕರಣಕ್ಕೆ ಜಾಗ ಬಿಟ್ಟುಕೊಡುವ ಮಾಲೀಕರಿಗೆ ಪರಿತ್ಯಜಿಸಿದ ಜಾಗದ ಒಂದೂವರೆ ಪಟ್ಟು ವರ್ಗಾಯಿಸಬಲ್ಲ ಅಭಿವೃದ್ಧಿ ಹಕ್ಕುಗಳನ್ನು (Transferable Development - Rights): ಪರಿಹಾರವಾಗಿ ನೀಡಲಾಗುವುದು.

ತೆರಿಗೆ ರೂಪದಲ್ಲಿ ಸಂದಾಯವಾದ ಹಣ

403(39) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಮಡಿಕೇರಿ)

ಅ) ಪ್ರಸ್ತುತ ವರ್ಷದಲ್ಲಿ ಕಳೆದ ಮಾರ್ಚ್‌ನಿಂದ ಆರ್ಥಿಕ ಇಲಾಖೆಗೆ ಯಾವ ಯಾವ ಇಲಾಖೆಯಿಂದ ತೆರಿಗೆ ರೂಪದಲ್ಲಿ ಹಣ ಸಂದಾಯವಾಗಿದೆ;

ಆ) ತೆರಿಗೆ ರೂಪದಲ್ಲಿ ಸಂದಾಯವಾದ ಮೊತ್ತವೆಷ್ಟು (ಅಬಕಾರಿ,ಸಾರಿಗೆ, ವಾಣಿಜ್ಯ ತೆರಿಗೆ, ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಸೇರಿ ಇತರೆ: ಇಲಾಖೆಗಳ ವಿವರ ನೀಡುವುದು)?